ಎಂದು ಹೇಳುವಾಗ ಯಾರಿಗೆ ಕಂಗ್ರಾಚುಲೇಶನ್ ಎಂದು ಹೇಳಬೇಕು ಎನ್ನುವ ನಿರ್ಧಾರವೇ ಆಗದ ನಮ್ಮಲ್ಲಿ ಬಸಿರು ಎನ್ನುವ ಕ್ರಿಯೆ ಇಬ್ಬರಿಂದ ನಡೆಯುತ್ತದೆ ಎನ್ನುವುದರ ಪೂರ್ತಿ ಪರಿವೆ ಇದ್ದರೂ ಅದನ್ನು ಪ್ರಕಟಮಾಡುವ ಹಿಂಜರಿಕೆ ಹಾಗೂ ನಾಲ್ಕುವರೆ ತಿಂಗಳ ನಂತರ ಗರ್ಭಿಣಿಯ ದೇಹದ ಬದಲಾವಣೆ, ಹೊಟ್ಟೆಯನ್ನು ನೋಡಿ, 'ಆರೋಗ್ಯದ ಬಗ್ಗೆ ಕಾಳಜಿ ತೆಗೆದುಕೊಳ್ಳಿ' ಎಂದು ಹೇಳುವುದು, ತುಂಬ ಹತ್ತಿರವಿದ್ದವರು ಎಷ್ಟು ವಾರವಾಯಿತು ಯಾವ ಡಾಕ್ಟರ್ ಇತ್ಯಾದಿ ಕೇಳುವುದು, ಬಸ್ಸಿನಲ್ಲಿ ಸೀಟು ಬಿಟ್ಟುಕೊಡುವುದೆಲ್ಲಾ ಗುರುಪಾದನ ತಲೆಯಲ್ಲಿ ಬಂತು.

ತಲೆಯಲ್ಲಿ ಹೊಯ್ದಾಟಗಳಿದ್ದರೂ ಗುರುಪಾದನ ಮನದಲ್ಲಿ 'ಏನೀಗ' ಎನ್ನುವ ಶಬ್ದ ಪ್ರಕಟವಾಯಿತು. 'ಇದೊಂದು ಖುಷಿಯ ಕ್ಷಣವಲ್ಲವೆ? ಇವನ್ನು ಯಾಕೆ ಧೈರ್ಯದಿಂದ ಸೀಯೊನ್ ಹಂಚಿಕೊಂಡಂತೆ ಹಂಚಿಕೊಳ್ಳಬಾರದು? ತಲೆ ಹುಗಿಸುವ ಮುಚ್ಚು ಮರೆ ಈ ವಿಷಯಕ್ಕೆ ಯಾಕೆ? ಇದೇ ನನ್ನ ತಂಗಿ ಬಂದು ಹೇಳಿದ್ದರೆ...' ಎಂದೆಲ್ಲ ನೆನಪಾಗಿ ಸೀಯೊನಳ ಮುಖಕ್ಕೆ ಮುಖ ಕೊಟ್ಟು ತುಂಬು ಪ್ರೀತಿಯಿಂದ ಮತ್ತೊಮ್ಮೆ ಶುಭ ಹಾರೈಸಿ... ನೀನು ಇನ್ನು ಆರೋಗ್ಯದ ಬಗ್ಗೆ ಹೆಚ್ಚಿನ ಕಾಳಜಿ ತೆಗೆದುಕೊಳ್ಳಬೇಕು. ಸರಿಯಾದ ಸಮಯಕ್ಕೆ ಮನೆಗೆ ಹೋಗಬೇಕು...' ಎಂದು ಧೈರ್ಯ ಮಾಡಿ ಎರಡು ವಾಕ್ಯ ಹೇಳಿದ. ಸೀಯೊನ್ ಕೂಡಾ ಖುಶಿಯಿಂದ ಕೇಳಿಸಿಕೊಂಡು ಕುಣಿಯುತ್ತಲೇ ತನ್ನ ಡೆಸ್ಕ್ ಕಡೆ ನಡೆದಳು.

ಸೀಯೊನ್ ಆರು ವರುಷಗಳಿಂದ ಈ ಕಂಪೆನಿಯಲ್ಲಿ ಕೆಲಸಮಾಡುತ್ತಿರುವ, ತನ್ನ ಕಾರ್ಯದಿಂದ ತುಂಬ ಹೆಸರುಮಾಡಿದಾಕೆ. ಏನು ಹೇಳಬೇಕು ಎಂಬುದನ್ನು ಮೊದಲೇ ನಿರ್ಧರಿಸಿ ಅದನ್ನು ತನ್ನ ಕಂಪ್ಯೂಟರ್‌ನಲ್ಲಿ ಸರಿಯಾಗೇ ಭಾಷಾಂತರಿಸಿ ಗುರುಪಾದನಲ್ಲಿ ಬರುವವಳು. ಏನೂ ಗೊತ್ತಿಲ್ಲದೇ ಕಾಲೇಜಿನಿಂದ ನೇರವಾಗಿ ಸೇರಿಕೊಂಡ ಎಂಟು ಜನರನ್ನು ಒಂದುವರೆ ವರುಷದಲ್ಲೇ ಈ ಕಂಪೆನಿಯ ಎಲ್ಲ ಕಾರ್ಯಗಳನ್ನು ಕಲಿಸಿ ಒಳ್ಳೆಯ ಸಹೋದ್ಯೋಗಿಗಳನ್ನು ತಯಾರು ಮಾಡಿದವಳು. ಕೆಲಸದ ರಿವ್ಯು ಮೀಟಿಂಗ್‌ಗಳಲ್ಲಿ ಹೊಸಬರು ಏನು ತಪ್ಪು ಮಾಡಿದರೂ ಆ ತಪ್ಪನ್ನು ತನ್ನಮೇಲೆ ಎರಚಿಕೊಂಡು ಅವರೆಲ್ಲ ಹೋದಮೇಲೆ 'ಅವರೆಲ್ಲ ಹೊಸಬರು ನಾನು ನೋಡಿಕೊಳ್ಳುತ್ತೇನೆ' ಎಂದು ಗುರುಪಾದನನ್ನು ಸಮಜಾಯಿಸುವವಳು. ಹೊಸ ಕಾರ್ಪೋರೇಟ್ ಯುಗದ ಶಬ್ದಗಳಾದ 'ಎಂಟರ್‌ಪ್ರಾಯಸಿಂಗ್' 'ಅಸರ್ಟಿವ್', 'ಇಂಟರ್ಪರ್ಸನಲ್ ಸಾವಿ' ಇತ್ಯಾದಿಗಳೆಲ್ಲಾ ಯಾವುದೇ ಶಿಕ್ಷಣದಿಂದಲ್ಲ ತನ್ನ ಸ್ವಭಾವತಾ ಪಡೆದವಳು. ಯಾವ ವಿಷಯವನ್ನು ಹೇಳಿದರೂ ಅವೆಲ್ಲಾ ಅವಳಿಗೆ ಗೊತ್ತಿದ್ದರೂ ವಿನಯದಿಂದಲೇ ಗೊತ್ತಿದೆ ಗೊತ್ತಿದೆ ಎನ್ನುತ್ತಾ ಕೆಲಸ ನಿಭಾಯಿಸುವವಳು. ತಪ್ಪೆಂದು ಕಂಡರೆ ಇದು ನಮ್ಮ ತಪ್ಪು ಎಂದು ಕ್ಷಣದಲ್ಲಿ ಉತ್ತರಿಸುವವಳು ಮತ್ತು ಒಪ್ಪಿಕೊಳ್ಳುವವಳು.

ಇವೆಲ್ಲವೂ ಹೌದು. ಅದಕ್ಕಾಗೆ ಸೀಯೊನ್ ಮ್ಯಾನೇಜರ್ ಮಟ್ಟಕ್ಕೆ ತಲುಪಿದ್ದಳು. ಯಾವಾಗ ತನ್ನ ಮೊದಲ ಮಗನ ಹೆರಿಗೆಗೆ ಸುಮಾರು ಏಳು ತಿಂಗಳು ಹತ್ತಿರದ ತನ್ನ ಅಮ್ಮನ ಮನೆಗೆ ಹೆರಿಗೆಗೆ ಹೋದಳೋ ಅವಳ ಹಳೆಯ ಆಫೀಸು ಅವಳನ್ನು ಮರೆತುಬಿಟ್ಟಿತ್ತು. ತನ್ನ ಬಾಣಂತನದಿಂದ ಬರುವವರೆಗೆ ಅವಳ ಜಾಗದಲ್ಲಿ ಇನ್ನೊಬ್ಬ ಕೂತಿದ್ದ. ಹೆಚ್ಚೇನು ಹೇಳುವ ಹಾಗೇನೂ ಇರಲಿಲ್ಲ. ತನ್ನ ಬಾಸ್ ಹತ್ತಿರ ಕೆಲವು ಬಾರಿ ಪ್ರಸ್ತಾಪ ಮಾಡಿದರೂ 'ಡಿಪಾರ್ಟ್‌ಮೆಂಟ್ ನಡೆಸಬೇಕಲ್ಲಾ. ಅವಕಾಶ ಬರಲಿ ಸ್ವಲ್ಪ ಕಾಯಿ' ಎಂದು ಹೇಳಿದ್ದ. ಅಲ್ಲಿಂದ ನಂತರ ಕೇವಲ ಸದಸ್ಯಳಾಗೇ ಮುಂದುವರಿದಳು. ತನ್ನ ಕೈಲಾದ ಮಟ್ಟಿಗೆ ಶಕ್ತಿಗೂ